# ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ವಿದ್ಯುತ್ ಯೋಜನೆ ಅಸಾಧ್ಯ

## ಉರುಂಬಿ ಯೋಜನೆ ವಿರುದ್ಧ ಪರಿಸರ ಜಾಗೃತಿ ಜಾಥಾದಲ್ಲಿ ಅಶೀಸರ

**ವಿಕ ಸುದ್ದಿಲೋಕ** ಕಡಬ

ಕೇಂದ್ರ ಸರಕಾರದ ಆದೇಶ ಪ್ರಕಾರ ಸುಳ್ಯ, ಪುತ್ತೂರು ತಾಲೂಕುಗಳು ಪಶ್ಚಿಮಘಟ್ಟ ಪ್ರದೇಶ ವ್ಯಾಪ್ತಿಗೆ ಒಳಪಟ್ಟಿದ್ದು ಇಲ್ಲಿ ಯಾವುದೇ ಜಲ ವಿದ್ಯುತ್ ಯೋಜನೆಗಳು ಅನುಷ್ಠಾನವಾಗಲು ಸಾಧ್ಯವಿಲ್ಲ ಎಂದು ರಾಜ್ಯ ಪಶ್ಚಿಮಘಟ್ಟ ಕಾರ್ಯ ಪಡೆ ಮಾಜಿ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಹೇಳಿದರು.

ಪೆರಾಬೆ ಗ್ರಾಮದ ಉರುಂಬಿಯಲ್ಲಿ ನಿರ್ಮಿಸಲು ಉದ್ದೇಶಿಸಿರುವ ಜಲವಿದ್ಯುತ್ ಯೋಜನೆ ವಿರುದ್ಧ ಬುಧವಾರ ಕುಮಾರಧಾರಾ ಪರಿಸರ ಸಂರಕ್ಷಣಾ ಸಮಿತಿ ಹಮ್ಮಿಕೊಂಡಿದ್ದ ಕೃಷಿಕರ ಸಂರಕ್ಷಣೆ ಹಾಗೂ ಪರಿಸರ ಜಾಗೃತಿ ಜಾಥಾ ಅಂಗವಾಗಿ ಕಡಬ ದುರ್ಗಾಂಬಿಕಾ ದೇವಸ್ಥಾನದ ವಠಾರದಲ್ಲಿ ನಡೆದ ಪ್ರತಿಭಟನಾ ಸಭೆ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಸುಳ್ಯ, ಪುತ್ತೂರು ತಾಲೂಕುಗಳನ್ನು ಸೂಕ್ಷ್ಮ ಪರಿಸರ ಪ್ರದೇಶ ಎಂದು ಪರಿಗಣಿಸಲಾಗಿದ್ದು, ಈ ಬಗ್ಗೆ ಅರಣ್ಯ ಇಲಾಖೆಗೂ ಪತ್ರ ರವಾನೆಯಾಗಿದೆ. ಇದರಿಂದಾಗಿ ಇಲ್ಲಿನ ನದಿಗಳಲ್ಲಿ ಅಣೆಕಟ್ಟು ನಿರ್ಮಾಣ ಬಿಡಿ ಮರಳು ಕೂಡ ತೆಗೆಯುವಂತಿಲ್ಲ ಎಂದು ಅಶೀಸರ ತಿಳಿಸಿದರು.

ಬೆಂಗಳೂರು ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ.ಟಿ.ವಿ.ರಾಮಚಂದ್ರನ್ ಮಾತನಾಡಿ, ನಮ್ಮ ಅಧ್ಯಯನದ ವೇಳೆ ಈ ಯೋಜನೆ ಪರಿಸರ ವಿರೋಧಿ ಎನ್ನುವ ಅಂಶ ಬೆಳಕಿಗೆ ಬಂದಿದೆ. ಉರುಂಬಿಯಲ್ಲಿ ಅಣೆಕಟ್ಟು ನಿರ್ಮಿಸಿದರೆ ಸುಮಾರು 1700 ಹೆಕ್ಟೇರ್ ಪ್ರದೇಶ ಮುಳುಗಡೆಯಾಗಲಿದೆ. ಜೀವ ವೈವಿಧ್ಯಗಳು, ಕೃಷಿ ಸಂಪತ್ತು ನಾಶವಾಗಲಿದೆ ಎಂದು ಅಧ್ಯಯನ ವರದಿ ದೃಢೀಕರಿಸಿದೆ. ಈ ವಿಚಾರದ ಬಗ್ಗೆ ಸರಕಾರಕ್ಕೆ ಈಗಾಗಲೇ ವರದಿ ನೀಡಲಾಗಿದೆ ಎಂದರು.



ಪರಿಸರ ಜಾಗೃತಿ ಜಾಥಾ ಸಭೆಯಲ್ಲಿ ಅನಂತ ಹೆಗಡೆ ಅಶೀಸರ ಮಾತನಾಡಿದರು.

ಪುತ್ತೂರು ಎಪಿಎಂಸಿ ಅಧ್ಯಕ್ಷ ಕೃಷ್ಣ ಶೆಟ್ಟಿ, ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯ ಎಚ್.ಕೆ.ಇಲ್ಯಾಸ್ ಮಾತನಾಡಿದರು. ಕಡಬ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಸತೀಶ್ ನಾಯಕ್ ಕಾರ್ಡ್ ಚಳವಳಿಗೆ ಚಾಲನೆ ನೀಡಿದರು. ಕಡಬ ತಾಲೂಕು ಹೋರಾಟ ಸಮಿತಿ ಅಧ್ಯಕ್ಷ ಸಿ.ಫಿಲಿಫ್ ಸಹಿಸಂಗ್ರಹಕ್ಕೆ ಚಾಲನೆ ನೀಡಿದರು. ಆರ್ಥಿಕ ತಜ್ಞ ಪ್ರೊ.ಬಿ.ಎಲ್. ಕುಮಾರಸ್ವಾಮಿ, ತಾಲೂಕು ಪಂಚಾಯಿತಿ ಸದಸ್ಯೆ ಪುಲಸ್ಯಾ ರೈ ಮಾತನಾಡಿದರು. ಜಿಪಂ ಸದಸ್ಯೆ ಆಶಾ ತಿಮ್ಮಪ್ಪ ಗೌಡ, ಜಿಲ್ಲಾ ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಸಿ.ಪಿ. ಸೈಮನ್, ಎಪಿಎಂಸಿ ಸದಸ್ಯ ಸೀತಾರಾಮ ಗೌಡ ಪೊಸವಳಿಕೆ, ಉದ್ಯಮಿ ಅಚ್ಚುತ್ತುಂಞಿ ಪದವು, ಡಾ.ಸುರೇಶ್ ಕುಮಾರ್ ಕೂಡೂರು ಮತ್ತಿತರರು ಉಪಸ್ಥಿತರಿದ್ದರು.

ಕುಮಾರಧಾರಾ ಪರಿಸರ ಸಂರಕ್ಷಣಾ ಸಮಿತಿ ಅಧ್ಯಕ್ಷ ಕರುಣಾಕರ ಗೋಗಟೆ ಸ್ವಾಗತಿಸಿದರು. ಡಾ.ರಾಜೇಶ್ ಬೀರಂತಡ್ಕ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಕಡಬ ನಾಡಕಚೇರಿಗೆ ಮೆರವಣಿಗೆಯಲ್ಲಿ ತೆರಳಿ ಕಡಬ ವಿಶೇಷ ತಹಸೀಲ್ದಾರ್ ಮುಖಾಂತರ ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು. ಸಭೆಗೂ ಮುನ್ನ ಬೀದಿ ನಾಟಕ ಮೂಲಕ ಜಾಗೃತಿ ಮೂಡಿಸಲಾಯಿತು.

ಇದಕ್ಕೂ ಮುನ್ನ ಉದ್ದೇಶಿತ ಉರುಂಬಿ ಅಣೆಕಟ್ಟು ಪ್ರದೇಶದಲ್ಲಿ ಕುಮಾರಧಾರಾ ನದಿಗೆ ಮಾತೆಯರು ಬಾಗಿನ ಅರ್ಪಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಿದರು. ಬಳಿಕ ಪದವು, ಹೊಸಮಠ, ಚಾರ್ವಾಕ ದೇವಿನಗರದಲ್ಲಿ ಪ್ರತಿಭಟನಾ ಸಭೆ ನಡೆಯಿತು.

### ಪ್ರಕೃತಿ ಸಂಪತ್ತಿನ ಕೃತಕ ನಿರ್ಮಾಣ ಸಾಧ್ಯವಿಲ್ಲ: ಸುಬ್ರಹ್ಮಣ್ಯ ಶ್ರೀ

**ಸುಬ್ರಹ್ಮಣ್ಯ:** ಪ್ರಕೃತಿ ಸಹಜವಾದ ಪರಿಸರ, ಪ್ರಕೃತಿ, ಕಾಡು, ನದಿಗಳನ್ನು ಮನಬಂದಂತೆ ತಿರುಗಿಸುವ, ಬದಲಾಯಿಸುವ ಯೋಜನೆಗಳಿಂದ ನಷ್ಟ, ದುರಂತಗಳೇ ಅಧಿಕ. ಪ್ರಾಕೃತಿಕ ಸಂಪತ್ತಿನ ಕೃತಕ ನಿರ್ಮಾಣ ಅಸಾಧ್ಯ. ಪ್ರಕೃತಿಯನ್ನು ವಿಕೃತಿ ಮಾಡಿದಾಗ ತಾತ್ಕಾಲಿಕ ಸುಖ, ನೆಮ್ಮದಿ ದೊರೆಯಲಿದೆಯೇ ಹೊರತು ಶಾಶ್ವತವಾಗಿ ಆದರ ದುಷ್ಪರಿಣಾಮಗಳೇ ಹೆಚ್ಚು ಎಂದು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ನುಡಿದರು.

ಕುಮಾರಧಾರಾ ಪರಿಸರ ಸಂರಕ್ಷಣಾ ಸಮಿತಿ ವತಿಯಿಂದ ಬುಧವಾರ ಕೃಷಿಕರ ರಕ್ಷಣೆ ಮತ್ತು ಪರಿಸರ ಸಂರಕ್ಷಣೆ ಕುರಿತು ನಡೆದ ಪರಿಸರ ಜಾಗೃತಿ ಜಾಥಾದ ಸಮಾರೋಪ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಪ್ರೊ.ಕುಮಾರಸ್ವಾಮಿ ಮಾತನಾಡಿ, 25 ಮೆಗಾವ್ಯಾಟ್ ವಿದ್ಯುತ್ ಉತ್ಪಾದನೆಯ ಉರುಂಬಿ ಜಲವಿದ್ಯುತ್ ಯೋಜನೆಯಿಂದ ಆರ್ಥಿಕವಾಗಿ ನಷ್ಟ ಎಂದು ಹೇಳಿದರು.

ಭಾರತೀಯ ವಿಜ್ಞಾನ ಸಂಸ್ಥೆಯ ವಿಜ್ಞಾನಿ ಡಾ. ರಾಮಚಂದ್ರನ್, ಪಶ್ಚಿಮಘಟ್ಟ ಕಾರ್ಯಪಡೆಯ ಮಾಜಿ ಅನಂತ ಹೆಗಡೆ ಅಶೀಸರ, ಕುಕ್ಕೆ ದೇವಳದ ವ್ಯವಸ್ಥಾಪನ ಸಮಿತಿ ಅಧ್ಯಕ್ಷ ಕೃಷ್ಣಪ್ರಸಾದ್ ಮಡ್ತಿಲ, ನ್ಯಾಯವಾದಿ ಶ್ರೀನಿವಾಸ ರಾವ್ ಮಾತನಾಡಿದರು.

ಸಮಿತಿ ಅಧ್ಯಕ್ಷ ಕರುಣಾಕರ ಗೋಗಟೆ ಅಧ್ಯಕ್ಷತೆ ವಹಿಸಿದ್ದರು. ಸಮಿತಿಯ ಎಲ್ಸಿ ತಾಮಸ್, ರಘುನಾಥ ಹೆಬ್ಬಾರ್, ಗೋಪಾಲಕೃಷ್ಣ ಇಟ್ಯಡ್ಕ ಉಪಸ್ಥಿತರಿದ್ದರು. ಡಾ.ರಾಜೇಶ್ ಕಾರ್ಯಕ್ರಮ ನಿರೂಪಿಸಿದರು. ಡಾ.ಸುರೇಶ್‌ಕುಮಾರ್ ಕೂಡೂರು ಸ್ವಾಗತಿಸಿದರು. ಕಿರಣ್ ಗೋಗಟೆ ವಂದಿಸಿದರು.

# ನದಿ ತಿರುವಿನಿಂದ ಶಾಶ್ವತ ದುಷ್ಪರಿಣಾಮ

## ಕುಮಾರಧಾರಾ ಪರಿಸರ ಸಂರಕ್ಷಣೆ ಜಾಥಾದಲ್ಲಿ ಸುಬ್ರಹ್ಮಣ್ಯ ಶ್ರೀ ಎಚ್ಚರಿಕೆ



ಸುಬ್ರಹ್ಮಣ್ಯ: ಪರಿಸರ ಜಾಗೃತಿ ಜಾಥಾ ಸಮಾಪನದಲ್ಲಿ ಸುಬ್ರಹ್ಮಣ್ಯ ಶ್ರೀ ಮಾತನಾಡಿದರು.

ಸುಬ್ರಹ್ಮಣ್ಯ, ಡಿ. 4: ನಮ್ಮ ಪ್ರಾಕೃತಿಕ ಸಂಪತ್ತು ಅಪಾರ ಹಾಗೂ ಅದು ಮಾನವ ನಿರ್ಮಿತವಲ್ಲ, ಪ್ರಕೃತಿ ಸಹಜವಾದ ಪರಿಸರ, ಪ್ರಕೃತಿ, ಕಾಡು, ನದಿಗಳನ್ನು ಮನಬಂದಂತೆ ತಿರುಗಿಸುವ, ಬದಲಾಯಿಸುವ ಹಕ್ಕು ನಮಗಿಲ್ಲ. ಹಾಗೇನಾದರೂ ಮಾಡಲು ಹೊರಟರೆ ಅದರಿಂದ ಶಾಶ್ವತವಾಗಿ ದುಷ್ಪರಿಣಾಮ ಎದುರಿಸಬೇಕಾದೀತು ಎಂದು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ನುಡಿದರು.

ಕುಮಾರಧಾರಾ ಪರಿಸರ ಸಂರಕ್ಷಣಾ ಸಮಿತಿಯು ಕೃಷಿಕರ ರಕ್ಷಣೆ ಮತ್ತು ಪರಿಸರ ಸಂರಕ್ಷಣೆಯ ಧ್ಯೇಯದೊಂದಿಗೆ ಬುಧವಾರ ನಡೆಸಿದ ಪರಿಸರ ಜಾಗೃತಿ ಜಾಥಾದ ಸಮಾಪನ ಕಾರ್ಯಕ್ರಮದಲ್ಲಿ ಅವರು ಆಶೀರ್ವಚನ ನೀಡಿದರು.

ಪ್ರಾಕೃತಿಕ ಸಂಪತ್ತಿನ ಕೃತಕ ನಿರ್ಮಾಣ ಅಸಾಧ್ಯ. ಪ್ರಕೃತಿಯನ್ನು ವಿಕೃತಿ ಮಾಡಿದಾಗ ತಾತ್ಕಾಲಿಕ ಸುಖ, ನೆಮ್ಮದಿ ದೊರೆಯುತ್ತದೆ; ಯೋಜನೆಗಳಿಂದ ನಷ್ಟ ದುರಂತಗಳೇ ಅಧಿಕ ಎಂದರು.

ಅವೈಜ್ಞಾನಿಕ ಯೋಜನೆಗಳಿಂದ ಪಶ್ಚಿಮ ಘಟ್ಟದ ಸಂಪದ್ಭರಿತ ನೆಲ-ಜಲ, ಜಲಚರ, ಪ್ರಾಣಿಪಕ್ಷಿ, ಸಸ್ಯಸಂಕುಲಗಳಿಗೆ ಬಾಧೆಯಾಗಲಿರುವುದರಿಂದ ಈ ಭಾಗದ ಪರಿಸರ ರಕ್ಷಣೆಗೆ ಎಲ್ಲರೂ ಮುಂದಾಗಬೇಕು ಎಂದರು.

### ನದಿ ತಿರುವು ಅಪ್ರಸ್ತುತ

ರಾಜಧಾನಿ ಬೆಂಗಳೂರಿನಲ್ಲಿ ನೀರಿಗೆ ಹಾಹಾಕಾರವಿದೆ ಎಂದು ಅಲ್ಲಿನ ದಾಹವನ್ನು ತೀರಿಸಲು ನೇತ್ರಾವತಿ ನದಿಯ ಹರಿವನ್ನು ತಿರುಗಿಸುವ ಯೋಜನೆಗೆ ಮುಂದಾಗಿರುವುದು ಅಪ್ರಸ್ತುತ. ನದಿನೀರು ಸಮುದ್ರಕ್ಕೆ ಹರಿದು ವ್ಯರ್ಥವಾಗುತ್ತಿದೆ; ಅದು ಬೆಂಗಳೂರು-ತುಮಕೂರಿಗೆ ಹರಿಯಬೇಕು ಎನ್ನುವ ಚಿಂತನೆ ತೀರಾ ಅವೈಜ್ಞಾನಿಕ. ಘಟ್ಟದ ತಪ್ಪಲಿನ ಮಂದಿ ಮೈ-ಮನಸ್ಸು ಗಟ್ಟಿಮಾಡಿ ಇಂತಹ ಯೋಜನೆಗಳ ವಿರುದ್ಧ ಹೋರಾಡಬೇಕು. ಬೆಂಗಳೂರು ಇಲ್ಲದಿದ್ದರೂ ನಮ್ಮ ನೆಲೆ, ಬದುಕು ಇದೆ ಎಂಬುದನ್ನು ತೋರಿಸಬೇಕೆಂದು ಪ್ರೊ| ಕುಮಾರಸ್ವಾಮಿ ಹೇಳಿದರು.

25 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಗಾಗಿ 1,700 ಹೆಕ್ಟೇರ್ ಪ್ರದೇಶದಲ್ಲಿ ಒಂದು ವರ್ಷಕ್ಕೆ 400 ಕೋಟಿ ರೂ. ಆದಾಯ ಕೃಷಿಯಿಂದ ಬರುವಾಗ ಕೇವಲ 220 ಕೋಟಿ ರೂ. ಆದಾಯ ಬರುವ ಉರುಂಬಿ ಜಲವಿದ್ಯುತ್ ಯೋಜನೆಯಿಂದ ಆರ್ಥಿಕವಾಗಿಯೂ ನಷ್ಟ ಅಲ್ಲದೆ ಈ ಭಾಗದ ಅಪರೂಪ ಹಾಗೂ ವಿನಾಶದ ಅಂಚಿನಲ್ಲಿರುವ ಸಸ್ಯಪ್ರಬೇಧ ಹಾಗೂ ಜಲಚರಗಳ ನಾಶವಾಗಲಿದೆ. ಆದ್ದರಿಂದ ಬಹುಜನರಿಗೆ ಅಹಿತವಾಗುವ ಈ ಯೋಜನೆಯೇ ಅಪ್ರಸ್ತುತ ಎಂದು ಜಲವಿದ್ಯುತ್ ಯೋಜನೆ ಕುರಿತು 5 ವರ್ಷ ಕ್ಷೇತ್ರ ಅಧ್ಯಯನ ನಡೆಸಿರುವ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಡಾ| ರಾಮಚಂದ್ರನ್ ಹೇಳಿದರು.

### ಬೆಂಬಲ

ಪಶ್ಚಿಮಘಟ್ಟ ಕಾರ್ಯಪಡೆಯ ಪೂರ್ವಾಧ್ಯಕ್ಷ ಅನಂತ ಹೆಗಡೆ ಆಶೀಸರ, ಸುಬ್ರಹ್ಮಣ್ಯ ದೇವಳದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೃಷ್ಣಪ್ರಸಾದ್ ಮಡ್ತಿಲ, ನ್ಯಾಯವಾದಿ ಶ್ರೀನಿವಾಸ ರಾವ್ ಮೊದಲಾದವರು ಈ ಹೋರಾಟಕ್ಕೆ ಬೆಂಬಲ ಸೂಚಿಸಿ ಮಾತನಾಡಿದರು.

ಸಮಿತಿಯ ಅಧ್ಯಕ್ಷ ಕರುಣಾಕರ ಗೋಗಟೆ ಅಧ್ಯಕ್ಷತೆ ವಹಿಸಿದ್ದರು. ಪದಾಧಿಕಾರಿಗಳಾದ ಎಲ್ಸಿ ಥಾಮಸ್, ರಘುನಾಥ ಹೆಬ್ಬಾರ್, ಗೋಪಾಲಕೃಷ್ಣ ಇಟ್ಯಡ್ಕ ಮೊದಲಾದವರು ವೇದಿಕೆಯಲ್ಲಿದ್ದರು. ಡಾ| ರಾಜೇಶ್ ಕಾರ್ಯಕ್ರಮ ನಿರೂಪಿಸಿದರು. ಡಾ| ಸುರೇಶ್ ಕುಮಾರ್ ಕೂಡೂರು ಸ್ವಾಗತಿಸಿದರು. ಕಿರಣ್ ಗೋಗಟೆ ವಂದಿಸಿದರು.

### ಉರುಂಬಿಯಿಂದ ಸುಬ್ರಹ್ಮಣ್ಯಕ್ಕೆ ಜಾಥಾ

ಕಡಬ: ಯೋಜನೆಯ ಉದ್ದೇಶಿತ ಸ್ಥಳ ಉರುಂಬಿಯಲ್ಲಿ ಬುಧವಾರ ಬೆಳಗ್ಗೆ ಕುಮಾರಧಾರಾ ನದಿಗೆ ಬಾಗಿನ ಅರ್ಪಿಸುವ ಮೂಲಕ ಜಾಥಾಕ್ಕೆ ಚಾಲನೆ ನೀಡಲಾಯಿತು. ಪದವು, ಕುಟ್ರುಪ್ಪಾಡಿ, ಕಡಬ, ಚಾರ್ವಾಕ ಮೂಲಕ ಸುಬ್ರಹ್ಮಣ್ಯ ತಲುಪಿ ಸಮಾರೋಪಗೊಂಡಿತು. ವಿವಿಧೆಡೆ ಜಾಗೃತಿ ಸಭೆ ನಡೆಯಿತು.

Udayavaani

5-12-2013

# ಉರುಂಬಿ ಯೋಜನೆಗೆ ವಿರೋಧ

## ■ ಪರಿಸರ ಜಾಗೃತಿ ಜಾಥಾ ■ ಬೀದಿ ನಾಟಕ ■ ಕಾರ್ಡ್ ಚಳವಳಿ ■ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ

**ಕಡಬ, ಡಿ. 4:** ಪುತ್ತೂರು ಮತ್ತು ಸುಳ್ಯ ಭಾಗ ಕೂಡ ಪಶ್ಚಿಮಘಟ್ಟದ ವ್ಯಾಪ್ತಿಗೆ ಬರುತ್ತದೆ. ಈ ಬಗ್ಗೆ ಸರಕಾರವು ಎಲ್ಲಾ ಅರಣ್ಯಾಧಿಕಾರಿಗಳಿಗೆ ಪತ್ರ ಬರೆದಿದೆ. ಪಶ್ಚಿಮಘಟ್ಟದ ವ್ಯಾಪ್ತಿಯೊಳಗೆ ಯಾವುದೇ ಪರಿಸರ ವಿರೋಧಿ ಯೋಜನೆ ಅನುಷ್ಠಾನಕ್ಕೆ ಅವಕಾಶವಿಲ್ಲ, ಆದುದರಿಂದ ಉರುಂಬಿ ಯೋಜನೆ ಅನುಷ್ಠಾನಗೊಳ್ಳುವುದು ಸಾಧ್ಯವೇ ಇಲ್ಲ ಎಂದು ಪಶ್ಚಿಮಘಟ್ಟ ಕಾರ್ಯಪಡೆಯ ಪೂರ್ವಾಧ್ಯಕ್ಷ ಅನಂತ ಹೆಗಡೆ ಆಶೀಸರ ಅವರು ನುಡಿದರು.

ಅವರು ಬುಧವಾರ ಕುಮಾರಧಾರಾ ಪರಿಸರ ಸಂರಕ್ಷಣೆ ಸಮಿತಿಯ ನೇತೃತ್ವದಲ್ಲಿ ಉದ್ದೇಶಿತ ಉರುಂಬಿ ಅಣೆಕಟ್ಟು ಯೋಜನೆಯನ್ನು ಕೈಬಿಡುವಂತೆ ಆಗ್ರಹಿಸಿ ಹಮ್ಮಿಕೊಳ್ಳಲಾದ ಪರಿಸರ ಜಾಗೃತಿ ಜಾಥಾ, ಬೀದಿ ನಾಟಕ, ರಾಜ್ಯಪಾಲರಿಗೆ ಯೋಜನೆಯ ರದ್ದತಿ ಆಗ್ರಹಿಸಿ ಕಾರ್ಡ್ ಚಳುವಳಿ ಹಾಗೂ



ಹೋರಾಟಗಾರರು ಕಡಬ ವಿಶೇಷ ತಹಶೀಲ್ದಾರ್ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

ಸಹಿ ಸಂಗ್ರಹ ಅಭಿಯಾನ ಕಾರ್ಯಕ್ರಮದ ಅಂಗವಾಗಿ ಕಡಬದ ಶ್ರೀ ದುರ್ಗಾಂಬಿಕಾ ಅಮ್ಮನವರ ದೇವಸ್ಥಾನದ ವಠಾರದಲ್ಲಿ ಆಯೋಜಿಸಲಾಗಿದ್ದ ಸಭೆಯಲ್ಲಿ ಮಾತನಾಡಿದರು. ಪಶ್ಚಿಮಘಟ್ಟದ ವ್ಯಾಪ್ತಿಯಲ್ಲಿ ಯಾವುದೇ ಪರಿಸರ ವಿರೋಧಿ ಯೋಜನೆಗಳಿಗೆ ಅವಕಾಶ ನೀಡುವುದಿಲ್ಲ ಎಂದು ಸರಕಾರವೇ ಹೈಕೋರ್ಟ್‌ಗೆ ಪತ್ರ ಬರೆದಿದೆ. ಆದುದರಿಂದ ಉರುಂಬಿ ಯೋಜನೆಗೆ ಅರಣ್ಯ ಇಲಾಖೆಯ ಕ್ಲಿಯರೆನ್ಸ್ ಸಿಗುವುದು ಸಾಧ್ಯವೇ ಇಲ್ಲ, ಕಳೆದ 2 ವರ್ಷಗಳಿಂದ ಕಂಪೆನಿಗೆ ಏನನ್ನೂ ಮಾಡಲು ಸಾಧ್ಯವಾಗಿಲ್ಲ. ಕಂಪೆನಿಯವರದು ವ್ಯರ್ಥ ಪ್ರಯತ್ನ, ಕಾನೂನು ಕಂಪೆನಿಗಳ ಪರ ಇಲ್ಲ ಅದು

ಅಗ್ರವಾರ್ತೆ

ಆಕ್ರೋಶ – ಆವೇಶ

▶ಪುಟ 5...

# ಉರುಂಬಿ ಯೋಜನೆಗೆ ವಿರೋಧ

(ಒಂದನೇ ಪುಟದಿಂದ)

ರೈತರ ಪರವಾಗಿವೆ ಎಂದ ಆಶೀಸರ, ರೈತರು ಯಾವುದೇ ಕಾರಣಕ್ಕೂ ಭಯಪಡಬೇಕಿಲ್ಲ ಎಂದರು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯ ಪರಿಸರ ವಿಜ್ಞಾನಿ ಟಿ.ವಿ.ರಾಮಚಂದ್ರನ್ ಮಾತನಾಡಿ, ಉರುಂಬಿಯಲ್ಲಿ ಅಣೆಕಟ್ಟು ನಿರ್ಮಾಣಗೊಂಡರೆ 1,700 ಹೆಕ್ಟೇರ್ ಭೂಮಿ ಮುಳುಗಡೆಯಾಗಲಿದೆ. ಅದರೊಂದಿಗೆ ಅರಣ್ಯ ಸಂಪತ್ತು, ವಿರಳಾತಿ ವಿರಳ ಜೀವ ವೈವಿಧ್ಯ, ಬೇರೆಲ್ಲೂ ಕಂಡುಬಾರದಂತಹ ಸಸ್ಯ ಪ್ರಭೇದ ನಾಶವಾಗಲಿದೆ. ಆದುದರಿಂದ ನಾವು ಯಾವುದೇ ಕಾರಣಕ್ಕೂ ಯೋಜನೆ ಅನುಷ್ಠಾನಗೊಳ್ಳಲು ಅವಕಾಶ ನೀಡಬಾರದು. ರಾಜಕಾರಣಿಗಳು ಮತ್ತು ಅಧಿಕಾರಿಗಳಿಂದ ನಮಗೆ ನ್ಯಾಯ ಸಿಗುವುದು ಕಷ್ಟ. ಆದರೆ ನ್ಯಾಯಾಲಯಗಳು ನಮ್ಮ ಪರವಾಗಿದೆ. ಪರಿಸರಕ್ಕೆ ಸಂಬಂಧಿಸಿ ಎಲ್ಲ ಕಡೆಯೂ ಕಾನೂನಿನಿಂದಲೇ ಪರಿಹಾರ ಸಿಕಿರುವುದು. ಆದುದರಿಂದ ಇತರ ಹೋರಾಟಗಳೊಂದಿಗೆ ಬಲವಾದ ಕಾನೂನು ಹೋರಾಟವನ್ನೂ ಸಂಘಟಿಸಬೇಕಿದೆ ಎಂದು ಹೋರಾಟಗಾರರಿಗೆ ಸಲಹೆ ನೀಡಿದರು.

ತಾ.ಪಂ.ಸದಸ್ಯೆ ಪುಲಸ್ಯ ರೈ, ಪುತ್ತೂರು ಎಪಿಎಂಸಿ ಅಧ್ಯಕ್ಷ ಕೃಷ್ಣ ಶೆಟ್ಟಿ, ಮಾತನಾಡಿದರು. ಕಡಬ ತಾಲೂಕು ಹೋರಾಟ ಸಮಿತಿಯ ಅಧ್ಯಕ್ಷ ಸಿ.ಫಿಲಿಪ್ ಸಹಿ ಸಂಗ್ರಹಕ್ಕೆ ಅಭಿಯಾನಕ್ಕೆ ಚಾಲನೆ ನೀಡಿದರು. ಕಡಬ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಸತೀಶ್ ನಾಯಕ್ ಕಾರ್ಡ್ ಚಳವಳಿಗೆ ಚಾಲನೆ ನೀಡಿದರು. ಪರಿಸರವಾದಿ, ಆರ್ಥಿಕ ತಜ್ಞ ಪ್ರೊ। ಬಿ.ಎಲ್.ಕುಮಾರಸ್ವಾಮಿ, ಜೆಡಿಎಸ್ ಮುಖಂಡ ಸಿ.ಪಿ.ಸೈಮನ್, ಎಪಿಎಂಸಿ ಸದಸ್ಯ ಸೀತಾರಾಮ ಗೌಡ ಪೊಸವಳಿಕೆ, ಕಾಂಗ್ರೆಸ್ ಮುಖಂಡ ಎಚ್.ಕೆ.ಇಲ್ಯಾಸ್ ಹೊಸ್ಮಠ, ಜಿ.ಪಂ. ಸದಸ್ಯೆ ಆಶಾ ತಿಮ್ಮಪ್ಪ ಗೌಡ, ಕುಟ್ರುಪ್ಪಾಡಿ ಗ್ರಾ.ಪಂ. ಮಾಜಿ ಅಧ್ಯಕ್ಷ ದೇವಯ್ಯ ಗೌಡ ಪನ್ಯಾಡಿ, ಅಚ್ಚಕುಂಞಿ ಕುಂತೂರುಪದವು ಉಪಸ್ಥಿತರಿದ್ದರು. ಕುಮಾರಧಾರ ಪರಿಸರ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಎನ್. ಕರುಣಾಕರ ಗೋಗಟೆ ಸ್ವಾಗತಿಸಿ ವಂದಿಸಿದರು. ಉಪನ್ಯಾಸಕ, ಪರಿಸರ ವಿಜ್ಞಾನಿ ಡಾ। ರಾಜೇಶ್ ಬೀರಂತಡ್ಕ ನಿರೂಪಿಸಿದರು. ಬಳಿಕ ದೇವಸ್ಥಾನದ ಬಳಿಯಿಂದ ಪಾದಯಾತ್ರೆಯ ಮೂಲಕ ತೆರಳಿದ ಪ್ರತಿಭಟನಕಾರರು ಕಡಬ ವಿಶೇಷ ತಹಶೀಲ್ದಾರರ ಕಚೇರಿಗೆ ತೆರಳಿ ಉರುಂಬಿ ಯೋಜನೆಗೆ ಅನುಮತಿ ನೀಡದಂತೆ ಆಗ್ರಹಿಸಿ ಮನವಿ ಸಲ್ಲಿಸಿದರು.

**■ ದುಡ್ಡು ಕೊಟ್ಟು ಜನ ಸೇರಿಸುವ ಅನುಷ್ಠಾನ ಸಮಿತಿ.**

**ಉರುಂಬಿಯಲ್ಲಿ ಅಣೆಕಟ್ಟು ನಿರ್ಮಿಸಲು ಮುಂದಾಗಿರುವ ಕಂಪೆನಿಯ ಪರವಾಗಿರುವ ಅನುಷ್ಠಾನ ಸಮಿತಿ ಒಬ್ಬೊಬ್ಬರಿಗೆ ಒಂದು ಸಭೆಗೆ 500 ರೂ. ನೀಡಿ ಜನ ಸೇರಿಸುವ ಪ್ರಯತ್ನ ನಡೆಸುತ್ತಿದ್ದಾರೆ.**

ಅನುಷ್ಠಾನ ಸಮಿತಿಯವರು ಕಂಪೆನಿಯವರಿಂದ ಹಣ ಪಡೆದು ಜನ ವಿರೋಧಿಯಾಗಿ ವರ್ತಿಸುತ್ತಿದ್ದಾರೆ. ಅನುಷ್ಠಾನ ಸಮಿತಿಯೊಂದಿಗೆ ಗುರುತಿಸಿಕೊಂಡಿರುವ ಮರಿ ಪುಡಾರಿಯೊಬ್ಬ ಈ ವಿಚಾರವನ್ನು ಸ್ವತಃ ನನ್ನೊಂದಿಗೆ ಒಪ್ಪಿಕೊಂಡಿದ್ದಾನೆ. ಮಾತ್ರವಲ್ಲದೇ ಹೋರಾಟ ಸಮಿತಿಯವರು ಹಣ ನೀಡುವುದಿದ್ದರೆ ನಿಮಗೂ ಜನ ಸೇರಿಸಿಕೊಡುವ ಕೆಲಸ ಮಾಡಲು ಸಿದ್ಧನಿದ್ದೇನೆ ಎಂದು ಹೇಳಿದ್ದಾನೆ. ಆದರೆ ನಮಗೆ ಅದರ ಅಗತ್ಯವಿಲ್ಲ. ನ್ಯಾಯಕ್ಕಾಗಿ ಹೋರಾಡುವ ನಮಗೆ ಹಣ ಕೊಟ್ಟು ಜನ ಸೇರಿಸುವ ಅಗತ್ಯವಿಲ್ಲ. ನಾವು ಈಗಾಗಲೇ ಅರಣ್ಯ ಸಚಿವರಿಗೆ ಮನವಿ ಮಾಡಿದ್ದೇವೆ. ಅವರಿಂದ ನಮಗೆ ಪೂರಕ ಸ್ಪಂದನೆ ದೊರೆತಿದೆ. ಅಗತ್ಯ ಬಿದ್ದರೆ ನಮ್ಮ ನಿಯೋಗ ಮುಖ್ಯಮಂತ್ರಿಗಳನ್ನು ಕೂಡ ಭೇಟಿ ಮಾಡಲಿದೆ ಎಂದು ಕಾಂಗ್ರೆಸ್ ಮುಖಂಡ ಎಚ್.ಕೆ.ಇಲ್ಯಾಸ್ ಹೊಸ್ಮಠ ಅವರು ಸಭೆಯಲ್ಲಿ ಹೇಳಿದರು.

**■ ಸಂಭಾವ್ಯ ಸಂತ್ರಸ್ತರಿಂದ ಬೀದಿ ನಾಟಕ: ಸಭಾ ಕಾರ್ಯಕ್ರಮಕ್ಕೆ ಮೊದಲು ಉರುಂಬಿ ಯೋಜನೆಯ ಸಂಭಾವ್ಯ ಸಂತ್ರಸ್ತ ಮಹಿಳೆಯರು ಹಾಗೂ ಪುರುಷರು ಅಭಿನಯಿಸಿದ 'ದೇಮಾಸುರ ವಧೆ' ಎನ್ನುವ ಯಕ್ಷಗಾನ ಮಿಶ್ರಿತ ಬೀದಿನಾಟಕ ಪ್ರದರ್ಶಿಸಲಾಯಿತು. ಅಣೆಕಟ್ಟು ನಿರ್ಮಾಣಗೊಂಡಲ್ಲಿ ಸಂತ್ರಸ್ತ ಜನರ ಬಾಳಿನ ಗೋಳು ಯಾವ ರೀತಿ ಇರುತ್ತದೆ ಎನ್ನುವುದನ್ನು ಬೀದಿ ನಾಟಕದ ಮೂಲಕ ಕಲಾವಿದರು ಪ್ರಸ್ತುತಪಡಿಸಿದರು. ಕಲಾವಿದ ಶಶಾಂಕ ಗೋಖಲೆ ಕಾರ್ಯಕ್ರಮ ಸಂಯೋಜಿಸಿದರು.**

**■ ಬೆಳಗ್ಗೆ ಪ್ರಸ್ತಾವಿತ ಅಣೆಕಟ್ಟು ಪ್ರದೇಶ ಉರುಂಬಿಯಲ್ಲಿ ಕುಮಾರಧಾರೆಗೆ ಭಾಗಿನ ಸಮರ್ಪಿಸಿದ ಬಳಿಕ ಪಶ್ಚಿಮಘಟ್ಟ ಕಾರ್ಯಪಡೆಯ ಪೂರ್ವಾಧ್ಯಕ್ಷ ಅನಂತ ಹೆಗಡೆ ಆಶೀಸರ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಬಳಿಕ ಪದವು ಬಸ್ ತಂಗುದಾನದ ಬಳಿ ನಡೆದ ಪ್ರಥಮ ಸಭೆಯಲ್ಲಿ ಅನಂತ ಹೆಗಡೆ ಆಶೀಸರ, ಜಿಲ್ಲಾ ಪಂಚಾಯತ್ ಸದಸ್ಯೆ ಆಶಾ ತಿಮ್ಮಪ್ಪ ಗೌಡ, ರಘುನಾಥ ನ್ಯಾಕ್ ಭಾಗವಹಿಸಿದರು. ಕುಟ್ರುಪ್ಪಾಡಿ ಗ್ರಾಮ ಪಂಚಾಯತ್ ವಠಾರದಲ್ಲಿ ನಡೆದ 2ನೇ ಸಭೆಯಲ್ಲಿ ಪಂಚಾಯತ್ ಅಧ್ಯಕ್ಷ ಸಂಜೀವ ಪೂಜಾರಿ, ಮಾಜಿ ಅಧ್ಯಕ್ಷ ದೇವಯ್ಯ ಗೌಡ ಪನ್ಯಾಡಿ, ಸಹಕಾರಿ ಧುರೀಣ ಸುಬ್ರಾಯ ಹೆಬ್ಬಾರ್, ಆರ್ಥಿಕ ತಜ್ಞ ಪ್ರೊ।ಬಿ.ಎಲ್.ಕುಮಾರಸ್ವಾಮಿ, ಕಾಂಗ್ರೆಸ್ ಮುಖಂಡ ಎಚ್.ಕೆ.ಇಲ್ಯಾಸ್ ಭಾಗವಹಿಸಿದರು.**

ಕುಮಾರಧಾರ ಪರಿಸರ ಸಂರಕ್ಷಣಾ ಸಮಿತಿಯ ಅಧ್ಯಕ್ಷ ಎನ್. ಕರುಣಾಕರ ಗೋಗಟೆ, ಪ್ರಮುಖರಾದ ರಘುನಾಥ ಹೆಬ್ಬಾರ್ ಹೊಸ್ಮಠ, ಡಾ। ಸುರೇಶ್‌ಕುಮಾರ್ ಕೂಡೂರು, ಎಲ್ಲಿ ತೋಮಸ್, ಡಾ। ರಾಜೇಶ್ ಬೀರಂತಡ್ಕ, ಮೋನಪ್ಪ ಗೌಡ ನಾಡೋಳಿ, ಕಿರಣ್ ಗೋಗಟೆ, ಯಾದವ ಬೀರಂತಡ್ಕ, ವಿಶ್ವನಾಥ ಗೌಡ, ಅಜಿತ್ ಹೆಬ್ಬಾರ್ ಮೊದಲಾದವರು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು.

Udayavaani

5-12-2013

ತುಳಸಿ ಕಡಬ



ಕಡಬ: ಉದ್ದೇಶಿತ ಉರುಂಬಿ ಅಣೆಕಟ್ಟು ಯೋಜನೆಯನ್ನು ಕೈಬಿಡುವಂತೆ ಆಗ್ರಹಿಸಿ ಕುಮಾರಧಾರ ಪರಿಸರ ಸಂರಕ್ಷಣಾ ಸಮಿತಿಯ ನೇತೃತ್ವದಲ್ಲಿ ಕಡಬದ ಮುಖ್ಯರಸ್ತೆಯಲ್ಲಿ ಪ್ರತಿಭಟನಕಾರರು ಪಾದಯಾತ್ರೆ ನಡೆಸಿದರು.



ಕಡಬ ಬಿಜೆಪಿ ಶಕ್ತಿ ಕೇಂದ್ರದ ಅಧ್ಯಕ್ಷ ಸತೀಶ್ ನಾಯಕ್ ಕಾರ್ಡ್ ಚಳುವಳಿಗೆ ಚಾಲನೆ ನೀಡಿದರು.



ಕಡಬ ತಾಲೂಕು ಹೋರಾಟ ಸಮಿತಿಯ ಅಧ್ಯಕ್ಷ ಸಿ. ಫಿಲಿಪ್ ಸಹಿ ಸಂಗ್ರಹಕ್ಕೆ ಅಭಿಯಾನಕ್ಕೆ ಚಾಲನೆ ನೀಡಿದರು.





■ ಉರುಂಬಿ ಯೋಜನೆಯ ಸಂಭಾವ್ಯ ಸಂತ್ರಸ್ತ ಮಹಿಳೆಯರು, ಪುರುಷರು ಅಭಿನಯಿಸಿದ 'ಡೇಮಾಸುರ ವಧೆ' ಎನ್ನುವ ಯಕ್ಷಗಾನ ಮಿಶ್ರಿತ ಬೀದಿನಾಟಕ ಪ್ರದರ್ಶಿಸಲಾಯಿತು. (ಮೇಲಿನ ಚಿತ್ರ)

■ ಪ್ರತಿಭಟನಾ ಸ್ಥಳದಲ್ಲಿ ತಲೆಗೆ ಹಸಿರು ಪಟ್ಟಿ ಧರಿಸಿ ಕೈಯಲ್ಲಿ ಹಸಿರು ಧ್ವಜ ಹಿಡಿದಿದ್ದ ಪೋರನೋರ್ವ 'ನಾಡಿನ ದೊರೆಯೇ..ಕೇಳಿಸದೇ ರೈತನ ಅರಣ್ಯ ರೋದನೆ..?' ಎನ್ನುವ ಫಲಕ ಪ್ರದರ್ಶಿಸುತ್ತಿರುವುದು. (ಬಲಗಡೆ ಚಿತ್ರ)

Udayavaani

5-12-2013

# ಚಾರ್ವಾಕ: ಅಣೆಕಟ್ಟು ವಿರೋಧಿಸಿ ಜಾಥಾ



**ಉರುಂಬಿಯಲ್ಲಿ ಅಣೆಕಟ್ಟು ನಿರ್ಮಾಣ ವಿರೋಧಿಸಿ ನಡೆದ ಪರಿಸರ ಜಾಗೃತಿ ಜಾಥಾದಲ್ಲಿ ಅನಂತ ಹೆಗಡೆ ಆಶೀಸರ ಮಾತನಾಡಿದರು.**

ಕಾಣಿಯೂರು, ಡಿ. 4: ಕುಮಾರಧಾರ ಪರಿಸರ ಸಂರಕ್ಷಣಾ ಸಮಿತಿಯ ವತಿಯಿಂದ ಪ್ರಸ್ತಾವಿತ ಉರುಂಬಿಯಲ್ಲಿ ಅಣೆಕಟ್ಟು ನಿರ್ಮಾಣಕ್ಕೆ ವಿರೋಧಿಸಿ ನಡೆದ ಪರಿಸರ ಜಾಗೃತಿ ಜಾಥಾ, ಕಾರ್ಡ್ ಚಳುವಳಿ ಕಾರ್ಯಕ್ರಮ ಚಾರ್ವಾಕ ಗ್ರಾಮದ ದೇವಿನಗರದಲ್ಲಿ ನಡೆಯಿತು.

ಈ ಸಂದರ್ಭದಲ್ಲಿ ಕಾಣಿಯೂರು ಗ್ರಾ.ಪಂ ಅಧ್ಯಕ್ಷ ದಿನೇಶ್ ಇಡ್ಯಡ್ಕ, ಎಡಮಂಗಲ ಗ್ರಾ.ಪಂ ಅಧ್ಯಕ್ಷೆ ವಿಶಾಲಾಕ್ಷಿ ಕೆ, ಪಶ್ಚಿಮಘಟ್ಟ ಕಾರ್ಯಪಡೆ ಪೂರ್ವಾಧ್ಯಕ್ಷ ಅನಂತ ಹೆಗಡೆ ಆಶೀಸರ, ಚಾರ್ವಾಕ ಸಿ.ಎ ಬ್ಯಾಂಕ್ ಅಧ್ಯಕ್ಷ ಸಿ.ಪಿ ಜಯರಾಮ ಗೌಡ, ಜಿಲ್ಲಾ ಜೆಡಿಎಸ್ ಘಟಕದ ಉಪಾಧ್ಯಕ್ಷ ಜಾಕೆ ಮಾಧವ ಗೌಡ,ಹೊಸಮಠ- ದೋಳ್ಪಾಡಿ ಕು.ಪ.ಸಂ ಸಮಿತಿಯ ಅಧ್ಯಕ್ಷ ಎನ್. ಕರುಣಾಕರ ಗೋಗಟೆ, ಹೊಸಮಠ-ದೋಳ್ಪಾಡಿ ಕು.ಪ.ಸಂ.ಸಮಿತಿಯ ಸಂಚಾಲಕ ಡಾ. ಸುರೇಶ್ ಕುಮಾರ್ ಕೂಡೂರು, ಮೂಡಬಿದ್ರೆ ಆಳ್ವಾಸ್ ಸಸ್ಯಶಾಸ್ತ್ರ ಪ್ರಾಧ್ಯಾಪಕ ಡಾ.ರಾಜೇಶ್ ಬಿ, ಡಾ| ಟಿ.ವಿ ರಾಮಚಂದ್ರ, ಡಾ.ರಾಜೇಶ್ವರಿ, ಕು.ಪ.ಸಂ.ಸಮಿತಿಯ ಉಪಾಧ್ಯಕ್ಷ ಗೋಪಾಲಕೃಷ್ಣ ಗೌಡ ಇಡ್ಯಡ್ಕ ಉಪಸ್ಥಿತರಿದ್ದರು.





ಸುಬ್ರಹ್ಮಣ್ಯ: ಕೃಷಿಕರ ರಕ್ಷಣೆ ಮತ್ತು ಪರಿಸರ ಸಂರಕ್ಷಣೆಯ ಧ್ಯೇಯದೊಂದಿಗೆ ನಡೆದ ಪರಿಸರ ಜಾಗೃತಿ ಅಭಿಯಾನವು ಸುಬ್ರಹ್ಮಣ್ಯದಲ್ಲಿ ಸಮಾಪನಗೊಂಡಿತು. ಅನಂತ ಹೆಗಡೆ ಆಶೀಸರ ಮಾತನಾಡಿದರು. ಸುಬ್ರಹ್ಮಣ್ಯ ಶ್ರೀಪಾದರು, ಪ್ರೊ| ಬಿ.ಎಂ. ಕುಮಾರಸ್ವಾಮಿ, ಡಾ| ಟಿ.ವಿ.ರಾಮಚಂದ್ರ, ರಾಜೇಶ್ವರಿ ರೇ, ಕರುಣಕಾರ ಗೋಗಟೆ, ಡಾ| ಸುರೇಶ್‌ಕುಮಾರ್ ಕೂಡೂರು, ಡಾ| ರಾಜೇಶ್, ಶ್ರೀನಿವಾಸ ರಾವ್ ಉಪಸ್ಥಿತರಿದ್ದರು. ಜಾಗೃತಿ ಜಾಥದಲ್ಲಿ ಪಾಲ್ಗೊಂಡ ನಾಗರಿಕರು.